2647 (2763) : ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ (ಬಾಗಲಕೋಟೆ)– ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವವರೇ ?

ಅ) ಬಾಗಲಕೋಟೆ ನಗರ ಪ್ರದೇಶ ಪುನರ್ವಸತಿ ಪ್ರದೇಶದಲ್ಲಿ ಹಾಗೂ ಕ್ಷೇತ್ರ ವ್ಯಾಪ್ತಿಯಲ್ಲಿ ಇಲಾಖೆಯವರು ಒದಗಿಸಿಕೊಟ್ಟ ಸೌಕರ್ಯಗಳ ವಿವರಗಳೇನು ?

ಆ) ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ ಮತ್ತಿತರ ಅಗತ್ಯ ಸೌಲಭ್ಯಗಳನ್ನು ಒದಗಿಸಿಕೊಡುವಲ್ಲಿ ಉಂಟಾದ ಅವ್ಯವಸ್ಥೆಯನ್ನು ಸರಿಪಡಿಸಿ ಅನುಕೂಲ ಮಾಡಿಕೊಡಲು ಸರ್ಕಾರದ ಮುಂದಿರುವ ಸಕಾಲಿಕ ಕ್ರಮಗಳೇನು ?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು)–

ಅ) ಬಾಗಲಕೋಟೆ ಹಳೇ ಪಟ್ಟಣ ಪ್ರದೇಶದಲ್ಲಿ ಮುಳುಗಡೆಯಾದ ಭಾಗದಲ್ಲಿ ಈ ಕೆಳಗಿನ ಕಾಮಗಾರಿಗಳು ಪ್ರಗತಿಯಲ್ಲಿದೆ.

1. ಆಂತರಿಕ ಒಳಚರಂಡಿ ಯೋಜನ
2. ಕುಡಿಯುವ ನೀರಿನ ವ್ಯವಸ್ಥೆ ಸುಧಾರಣೆ
3. ಲಿಂಕ್ ರಸ್ತೆಗಳ ಅಭಿವೃದ್ಧಿ

ಆಂತರಿಕ ಒಳಚರಂಡಿ ಕಾಮಗಾರಿ ಹಾಗೂ ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಪೂರ್ಣಗೊಂಡ ಬಳಿಕ ಆಂತರಿಕ ರಸ್ತೆಗಳ ಸುಧಾರಣೆ ಕಾರ್ಯ ಪ್ರಾರಂಭಿಸಲಾಗುವುದು.

ಬಾಗಲಕೋಟೆ ಒಳಚರಂಡಿ ಕಾಮಗಾರಿ ಹಾಗೂ ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಸುವ ಕಾಮಗಾರಿ ಪೂರ್ಣಗೊಂಡ ಬಳಿಕ ಆಂತರಿಕ ರಸ್ತೆಗಳ ಸುಧಾರಣೆ ಕಾರ್ಯ ಪ್ರಾರಂಭಿಸಲಾಗುವುದು.

ಬಾಗಲಕೋಟೆ ಪಟ್ಟಣದ ಪುನರ್ವಸತಿ ಪ್ರದೇಶ ಅಂದರೆ ನವನಗರದಲ್ಲಿ ಈ ಕೆಳಗಿನ ಸೌಕರ್ಯ ಕಲ್ಪಿಸಲಾಗಿದೆ.

1 ಆಂತರಿಕ ಒಳಚರಂಡಿ ಯೋಜನೆ
2 ಕುಡಿಯುವ ನೀರಿನ ಯೋಜನೆ
3 ರಸ್ತೆಗಳು
4 ವಿದ್ಯುತ್ ಸೌಲಭ್ಯ

5 ಶಾಲೆಗಳು–ಹೈಸ್ಕೂಲ್‌ಗಳು, ಪ್ರಾಥಮಿಕ ಶಾಲೆಗಳು, ನರ್ಸರಿ ಶಾಲೆಗಳು

6 ಅಂಗಡಿ ಮಳಿಗೆಗಳು

7 ಅಂಗಡಿ ಜಾಗಗಳು

8 ಮೂರು ಸ್ಮಶಾನಗಳು

9 ನಾಲ್ಕು ಉದ್ಯಾವನಗಳು

10 ಜಿಲ್ಲಾ ಆಸ್ಪತ್ರೆ

11 ಜಿಲ್ಲಾ ಕ್ರೀಡಾಂಗಣ

12 ಅಂಬೇಡ್ಕರ್ ಭವನ

13 ಎಲ್ಲಾ ಸರ್ಕಾರಿ ಕಛೇರಿಗಳಿಗೆ ಕಟ್ಟಡಗಳು

14 ಸರ್ಕಾರಿ ನೌಕರರ ವಸತಿ ಗೃಹಗಳು

15 ನಾಲ್ಕು ಹಾಸ್ಟೆಲ್‌ಗಳು

16 ಖಾಸಗಿ ಐದು ಹೈಸ್ಕೂಲ್‌ಗಳು

17 ಚರ್ಚ್ ಮತ್ತು ಮಸೀದಿಗಳು

18 ಖಾಸಗಿ ಗುಡಿಗಳು

19 ರಿಯಾಯಿತಿ ಬಸ್ ಸೌಲಭ್ಯ (240 trips per day)

20 ಹದಿನೈದು ಬಸ್ ನಿಲ್ದಾಣಗಳು, ಬಸ್ ಸ್ಟೇಷನ್‌ಗಳು ಹಾಗೂ ಡಿಪೋ

21 ಧಾಯರ್ ಬ್ರಗೇಡ್

22 ನಾಲ್ಕು ಪೆಟ್ರೋಲ್ ಬಂಕ್‌ಗಳು

23 ನಗರಸಭೆ ಕಟ್ಟಡ

24 ಆರು ಬ್ಯಾಂಕ್‌ಗಳು

25 ಆದಾಯಕರ ಕಚೇರಿ

26 ಜೀವವಿಮಾ ಕಟ್ಟಡ

27 ಸಂಪರ್ಕ ರಸ್ತೆಗಳು

ಕ್ಷೇತ್ರ ವ್ಯಾಪ್ತಿಯಲ್ಲಿ ಪುನರ್ವಸತಿ ಪ್ರದೇಶದಲ್ಲಿ ನಿರ್ಧರಿಸಿದ ಮೂಲಭೂತ ಸೌಕರ್ಯಗಳಾದ ರಸ್ತೆ, ಕುಡಿಯುವ ನೀರಿನ ವ್ಯವಸ್ಥೆ, ಬೀದಿ ದೀಪ, ಚರಂಡಿ, ಶಾಲಾ ಕಟ್ಟಡ, ಸ್ಮಶಾನ, ಶೌಚಾಲಯ ಇವುಗಳನ್ನು ಒದಗಿಸಲಾಗಿದೆ. ಇದಲ್ಲದೇ ಹೆಚ್ಚುವರಿಯಾಗಿ ಗ್ರಾಮೀಣ ಪಶು

ಚಿಕಿತ್ಸಾಲಯ, ಕಿರಿಯ ಮಹಿಳಾ ಸಹಾಯಕಿಯರ ಕೇಂದ್ರ, ಅಗಸಿ ಕಟ್ಟಡ, ಸಮುದಾಯ ಭವನ, ದೋಬಿ ಘಾಟ್ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಲಾಗಿದೆ.

ಆ) ಸಂತ್ರಸ್ಥರು ಕಟ್ಟಡ ನಿರ್ಮಾಣಕ್ಕಾಗಿ ಕುಡಿಯುವ ನೀರನ್ನು ಬಳಕೆ ಮಾಡುತ್ತಿರುವುದರಿಂದ, ಹೆಚ್ಚಿನ ಪ್ರಮಾಣದಲ್ಲಿ ನೀರಿನ ಬಳಕೆಯಾಗುತ್ತದೆ. ಆದಾಗ್ಯೂ ದಿನನಿತ್ಯ ನೀರು ಸರಬರಾಜು ಕೈಗೊಳ್ಳಲಾಗುತ್ತಿದೆ. ಇದೂ ಅಲ್ಲದೆ ಬಾಗಲಕೋಟೆ ನಗರ ಮತ್ತು ಪುನರ್ವಸತಿ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯ ಒಸಗಿಸುವ ಕಾರ್ಯ ಸಮರ್ಪಕವಾಗಿದೆ.

300 : ಶ್ರೀ ಓಲೀಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ)– ಮಾನ್ಯ ಕೃಷಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವವರೇ ?

ಅ) ಕಳೆದ 3 ವರ್ಷಗಳಲ್ಲಿ ಸಿ.ಎ.ಜಿ ಯವರು ವರದಿಯ ಅನ್ವಯ ರಾಜ್ಯಸ್ವ ಹಾಗೂ ಬಂಡವಾಳ ಲೆಕ್ಕದಲ್ಲಿ ಯಾವ ಯಾವ ಇಲಾಖೆಗಳು ಬಜೆಟ್‌ನಲ್ಲಿ ನಿಗದಿಪಡಿಸಿದ ಮೊತ್ತಕ್ಕಿಂತ ಹೆಚ್ಚು ಹಣವನ್ನು ವೆಚ್ಚ ಮಾಡಿವೆ ; ಹೀಗೆ ವೆಚ್ಚ ಮಾಡಿದ ಹೆಚ್ಚುವರಿ ಮೊತ್ತವೆಷ್ಟು ;

ಆ) ಯಾವ ಯಾವ ಇಲಾಖೆಗಳು ಕಳೆದ 3 ವರ್ಷಗಳ ಅವಧಿಯಲ್ಲಿ ಬಜೆಟ್‌ನಲ್ಲಿ ನಿಗದಿಪಡಿಸಿದ ಮೊತ್ತವನ್ನು ಸಕಾಲದಲ್ಲಿ ವೆಚ್ಚ ಮಾಡದೇ ಉಳಿಸಿವೆ ಹಾಗೂ ಅದರ ಮೊತ್ತ ಎಷ್ಟು ;

ಇ) ಸಿ.ಎ.ಜಿ ರವರ ವರದಿ ಅನ್ವಯ 3 ವರ್ಷಗಳಲ್ಲಿ ದಾಖಲಿಸಲಾದ ಅಕ್ರಮಗಳ ವಿವರಗಳೇನು ;

ಈ) ಈ ತರಹದ ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಅಧಿಕಾರಿಗಳನ್ನು ಗುರುತಿಸಿ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆಯೇ ; ಹಾಗಿದ್ದಲ್ಲಿ ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು)–

ಅ) ಆಹಾರ ಮತ್ತು ಕಟಾವು ತಂತ್ರಜ್ಞಾನ ಇಲಾಖೆಗೆ ಪ್ರತ್ಯೇಕವಾದ ಆಯವ್ಯಯ ಲೆಕ್ಕ ಶಿರ್ಷಿಕೆ ಇರುವುದಿಲ್ಲ. ಆದುದರಿಂದ ಇದು ಈ ಇಲಾಖೆಗೆ ಅನ್ವಯಿಸುವುದಿಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.